SC 10/2025

**ಪಿ ಡಬ್ಲ್ಯೂ: 1**

**ದಿ: 27-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಯಿಂದ**

ಪ್ರತಿವಾದಿಗೆ ಸಾಲ ಕೊಡುವಾಗ ವಾದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ದಿನಾಂಕ 13.12.2023 ರಂದು ನಾನು ವಾದಿ ಬ್ಯಾಂಕಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿರುವವರು ಗಂಡಸರು ಇರುತ್ತಾರೆ. ನಿಪಿ.1 ರಲ್ಲಿ ಹನುಮಂತನಾಯ್ಕ W/o ಗೋನ್ಯಾನಾಯ್ಕ ಇರುತ್ತದೆ ಎಂದರೆ ಸಾಕ್ಷಿಯು S/o ಗೋನ್ಯಾನಾಯ್ಕ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರುವ ಕ್ರಮ ಸಂಖ್ಯೆ 14 ರಲ್ಲಿ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅರ್ಜಿ ಸಲ್ಲಿಸಿದವರೇ ತಿದ್ದುಪಡಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ರ ಕ್ರಮ ಸಂಖ್ಯೆ 14 ರಲ್ಲಿ ಅಭಿವೃದ್ದಿಗೆ ಬೇಕಾಗಿರುವ ಹಣ 30 ಸಾವಿರ ಎನ್ನುವುದನ್ನು ತಿದ್ದುಪಡಿ ಮಾಡಿರುತ್ತಾರೆ. ಸದರಿ ತಿದ್ದುಪಡಿಗೆ ಚಿಕ್ಕ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ.1 ರಲ್ಲಿರುವ ಶಾಖೆಯ ಉಪಯೋಗಕ್ಕಿರುವ ಕಾಲಂ ನಲ್ಲಿ 2 ವರ್ಷ ಎಂದು ಇರುವುದು ತಿದ್ದುಪಡಿ ಆಗಿರುತ್ತದೆ ಎಂದರೆ ಸರಿ. ನಿಪಿ.6 ರ ಜೊತೆ ಇರುವ Particulars of movable/immovable assets ದಾಖಲೆಯಲ್ಲಿ ಅರ್ಜಿದಾರರ ಹೆಸರನ್ನು ಹನುಮಂತಪ್ಪ ಸನ್ ಆಫ್ ಗೋಣ್ಯಾನಾಯ್ಕ ವಾಸ: ಕಬ್ಬಳ ಎಂದು ನಮೂದಿಸಿರುತ್ತೇವೆ. ನಿಪಿ.1 ರಲ್ಲಿ ಮತ್ತು ನಿಪಿ.6 ರಲ್ಲಿರುವ ಅರ್ಜಿದಾರರ ಹೆಸರು ಒಂದಕ್ಕೊಂದು ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಪೆಟ್ಟಿ ಬೀಡಾ ಸ್ಟಾಲ್ ಎಂದು ಇರುತ್ತದೆ. ಸದರಿ ಅಂಗಡಿ ಈಗ ಇರುತ್ತದೆಯೋ ಇಲ್ಲವೋ ಪರಿಶೀಲನೆ ಮಾಡಿಲ್ಲ. ಅಂಗಡಿ ಇರುವ ಜಾಗ ಅರ್ಜಿದಾರರ ಹೆಸರಿನಲ್ಲಿ ಇರುತ್ತದಯೋ ಇಲ್ಲವೋ ಎನ್ನುವ ಬಗ್ಗೆ ದಾಖಲೆ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ ಕಾರಣ ನಾನು ಆ ಸಮಯದಲ್ಲಿ ವಾದಿ ಬ್ಯಾಂಕ್ ಶಾಖೆಯಲ್ಲಿ ಇರಲಿಲ್ಲ. ಅಂಗಡಿ ನಡೆಸಲು ಪರವಾನಗಿ ಇದ್ದ ಬಗ್ಗೆ ದಾಖಲೆ ಪಡೆದಿದ್ದೀರಾ ಎಂದರೆ ಸಾಕ್ಷಿಯು ಆಗ ಪರವಾನಗಿ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಜಾಮೀನುದಾರರ ಅವಶ್ಯಕತೆ ಇಲ್ಲದ ಕಾರಣ ಯಾವುದೇ ಜಾಮೀನುದಾರರನ್ನು ಪಡೆದಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.